<u>ಸಾಕ್ಷಿಯನ್ನು ದಿ. ***13-11-2025*** ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>

<u>ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದ :</u>

ನಾನು ಈ ಪ್ರಕರಣದಲ್ಲಿ ಎದುರುದಾರನಾಗಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ವಿಚಾರ ಸರಿಯಿದ್ದು, ಸಹಿ ನನ್ನದೇ ಅಗಿರುತ್ತದೆ.

| | |
|---|---|
| ನಿ.ಆರ್ 1 ಮತ್ತು 2 | ಮಧ್ಯಂತರ ಪರಿಹಾರ ನೀಡಿದ ಒಂದು ರಶೀದಿ ಹಾಗೂ ಮುಚ್ಚಳಿಕೆ ಪತ್ರಗಳು ಕ್ರಮವಾಗಿ |
| ನಿ.ಆರ್ 3 | ಪೋಲೀಸ್ ಅಧೀಕ್ಷಕರಿಗೆ ನೀಡಿದ ದೂರಿನ ಸ್ವೀಕೃತಿ ಪ್ರತಿ |
| ನಿ.ಆರ್ 4 | ಹೊಸಕೋಟೆ ಸಂಚಾರ ಪೋಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿ |
| ನಿ.ಆರ್ 5 | ಅಂಚೆ ರಶೀದಿ |

<u>ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀ.ಕೆವಿಎನ್ ವಕೀಲರಿಂದಃ</u>

ನಾನು ದಿ.16-12-2023 ರಂದು ಕೆಎಸ್ಆರ್‌ಟಿಸಿ ಬಸ್ ಸಂ.KA-07-F-1704 ರಲ್ಲಿ ಹೆಚ್ಚುವರಿ ಚಾಲಕನಾಗಿ ಚಲಾಯಿಸುತ್ತಿದ್ದೆ. ತಮಗೆ ಈ ರೂಟ್ ಹೊಸತು ಎಂದರೆ ಸಾಕ್ಷಿಯು ತಿರುಪತಿಗೆ ಹೋಗಲು ಈ ಮಾರ್ಗದಲ್ಲಿ ಹೋಗುತ್ತಿದ್ದೆವು ಎನ್ನುತ್ತಾರೆ. ದಿ.16-12-2023 ರಂದು ರಾತ್ರಿ 11.45 ರ ಸಮಯದಲ್ಲಿ ನಿಡಘಟ್ಟ ಮತ್ತು ಅಟ್ಟೂರು ಹಳ್ಳಿಯ ಮಧ್ಯದಲ್ಲಿ ಬಸ್‌ನಿಂದ ಅಪಘಾತವಾಗಿದೆ ಎಂದರೆ ಸರಿ. ಪಾದಚಾರಿಗೆ ಡಿಕ್ಕಿಯಾಗಿದ್ದು, ಆದರೆ ಆತನ ಹೆಸರು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಮಾರ್ಗದಲ್ಲಿ ನಾನು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತಕ್ಕೊಳಪಟ್ಟ ವ್ಯಕ್ತಿಯನ್ನು ನಾನು ನೋಡಿರುವುದಿಲ್ಲ. ಸದರಿ ವ್ಯಕ್ತಿಯು ಡಿವೈಡರ್ ಮಧ್ಯಭಾಗದಲ್ಲಿದ್ದ ಗಿಡಗಳಿಂದ ತಕ್ಷಣವೇ ಬಂದಿದ್ದು ನಾನು ಬ್ರೇಕನ್ನು ಹಾಕಿದ್ದು ಆತನ ಬಳಿ ಹೋದಾಗ ವಾಹನವು ಡಿಕ್ಕಿಯಾಗಿರುತ್ತದೆ.

2. ಬಸ್‌ನ ಮುಂಭಾಗದ ಬಲಭಾಗವು ಸದರಿ ವ್ಯಕ್ತಿಗೆ ಡಿಕ್ಕಿಯಾಗಿರುತ್ತದೆ. ನಿ.ಆರ್ 3 ರಿಂದ 5 ನ್ನು ತಾವು ತಮ್ಮ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ತಾವು ತಪ್ಪಾಗಿ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ವ್ಯಕ್ತಿಗಳು ನನ್ನ ಮೇಲೆ ಹಲ್ಲೆ ಮಾಡಲು ಬಂದ ಕಾರಣ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಲು ಪ್ರಯತ್ನಿಸಲಿಲ್ಲ. ಅಂತಿಮ ವರದಿಯನ್ನು ತಮ್ಮ ಮೇಲೆ ಪೋಲೀಸರು ಸಲ್ಲಿಸಿದ್ದು ಕ್ರಿಮಿನಲ್ ಪ್ರಕರಣವು ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ತಮ್ಮ ಅತಿವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿದ್ದರೂ ತಾವು ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರುಗಳನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ

ಎಂದರೆ ಸರಿಯಲ್ಲ. ಪರಿಹಾರವನ್ನು ಅರ್ಜಿದಾರರಿಗೆ ತಾವೇ ನೀಡಲು ಬಾಧ್ಯರು ಎಂದರೆ ಸರಿಯಲ್ಲ. ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**(ಓ.ಹೇ.ಕೇ.ಸ.ಇ.)**

**23** ನೇ ಎ.ಎಸ್.ಸಿ.ಜೆ ಮತ್ತು ಎ.ಸಿ.ಜೆ.ಎಂ
ನ್ಯಾಯಾಧೀಶರು.
ಬೆಂಗಳೂರು.